**<u>ಸಾಕ್ಷಿಯನ್ನು ದಿಃ 02.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀಮತಿ ಬಿ.ಕೆ.ಎಸ್ ವಕೀಲರಿಂದಃ-</u>**

ಈ ದಾವಾ ಸ್ವತ್ತುಗಳನ್ನು ಹೊರತು ಪಡಿಸಿ ಬೇರೆ ಪಿತ್ರಾರ್ಜಿತ ಸ್ವತ್ತುಗಳು ಸಹ ಇವೆ ಎಂದರೆ ಸರಿಯಲ್ಲ. ಅಗತ್ಯ ಪಕ್ಷಗಾರರನ್ನು ಈ ಕೇಸ್ ನಲ್ಲಿ ಪಕ್ಷಗಾರರನ್ನಾಗಿ ಮಾಡಿಸಿಲ್ಲ ಎಂದರೆ ಸರಿಯಲ್ಲ, ಎಲ್ಲರನ್ನು ಪಕ್ಷಗಾರರನ್ನಾಗಿ ಮಾಡಲಾಗಿದೆ ಎನ್ನುತ್ತಾರೆ. ಓ.ಎಸ್ 461/2015 ರಂತೆ ಇನ್ನೊಂದು ದಾವೆ ಸಿವಿಲ್ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾವು ತಕರಾರು ಸಲ್ಲಿಸಿದ ವಿಚಾರವನ್ನು ಈ ಕೇಸ್ ನಲ್ಲಿ ಎಲ್ಲಿಯೂ ಹೇಳಿಲ್ಲ ಎಂದರೆ ಸಾಕ್ಷಿ ಹೇಳಿದ್ದೇನೆ ಎನ್ನುತ್ತಾರೆ. ದಿಃ 05.12.2012 ರಲ್ಲಿ 3 ಗುಂಟೆ ಜಮೀನನ್ನು 5 ನೇ ಪ್ರತಿವಾದಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ, ಆದರೆ ನಮ್ಮ ಸಹಿ ಪಡೆದಿಲ್ಲ ಎನ್ನುತ್ತಾರೆ. 5 ನೇ ಪ್ರತಿವಾದಿ ಸೋಮೇಶಗೌಡ ನನಗೆ ಗೊತ್ತು. ಪಟೇಲ್ ವೀರಭದ್ರೇಗೌಡ ನನ್ನ ಅಣ್ಣ. ಪಟೇಲ್ ವೀರಭದ್ರೇಗೌಡ ತನ್ನ ಕಾನೂನು ಬದ್ಧ ಅವಶ್ಯಕತೆಗಾಗಿ 5 ನೇ ಪ್ರತಿವಾದಿ ದಿಃ 05.12.2012 ರಂದು ಮಾರಾಟ ಮಾಡಿದ್ದರು ಎಂದರೆ ನಮ್ಮನ್ನು ಕರೆದಿಲ್ಲ ಎನ್ನುತ್ತಾರೆ. ಆದ್ದರಿಂದ ಈ ಕೇಸ್ ಊರ್ಜಿತವಾಗತಕ್ಕದ್ದಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.